

**ಕ್ಷಮೆ ಅನ್ನುವುದು ಪ್ರೀತಿಯ ಇನ್ನೊಂದು ರೂಪ. ಮಧುರವಾದ ಪ್ರತೀಕಾರ. ಸೋತು ಗಳಿಸುವ ಸ್ವಾಧೀನ!**

ಇದು ಯಾವ ಜನ್ಮದ ಮೈತ್ರಿ? ಲಲಿತಾ ಮತ್ತು ಈ ಹುಡುಗಿ ಕ್ಷಮಾ, ಈಗ ಇವರ ಒಡನಾಟವನ್ನು ಕಂಡಾಗ ಮತ್ತೆಮತ್ತೆ ಹೀಗನಿಸುವುದು. ತಿಂಗಳು ತಿಂಗಳಿಗೆ, ವಾರ ವಾರಕ್ಕೆ, ದಿನ ದಿನಕ್ಕೂ ಈ ಬೆಸುಗೆ ಬಲವಾಗಿ ಕೂಡುತ್ತಿದೆ. ಗುರು ಶಿಷ್ಯರ ಸಂಬಂಧವನ್ನು ಮೀರಿದ ಒಂದು ಭಾವದೊಳಗೆ ಈ ಜೀವಗಳು ಸಹಜವಾಗಿ ಪರಸ್ಪರ ಸ್ವಂತವಾಗುತ್ತಿವೆ. ನನಗಾದರೋ ಏನನ್ನೂ ಕಳಕೊಳ್ಳದೆ, ಅಮೂಲ್ಯವಾದುದೇನನ್ನೋ ಪಡೆದು ನಡೆಯುತ್ತಿರುವ ಕಾಲದ ಲಯದಲ್ಲಿ ಸೇರಿಹೋದ ತನ್ಮಯಭಾವ. ಟ್ಯೂಶನಿಗಾಗಿ ಬರುವ ಇತರ ಮಕ್ಕಳಂತೆ ಒಂದು ಅಘೋಷಿತ ಶಿಸ್ತು ಈಕೆಯಲ್ಲಿ ನಾನೆಂದೂ ಕಾಣಲಿಲ್ಲ. ಅಲ್ಲದೆ ಪರೀಕ್ಷೆಯಲ್ಲಿ ಮಾರ್ಕ್ಸ್ ಸೇರಿಸುವ ಉದ್ದೇಶದ ತತ್ಪರತೆಯೂ ಇರಲಿಲ್ಲ. ನಮ್ಮ ಕಾಂಪೌಂಡ್ ಗೋಡೆಯ ಹೊರಗೆ ತನ್ನ ಪಾಡಿಗೆ ಹಾರಾಡುತಿದ್ದ ಬಣ್ಣದ ಚಿಟ್ಟೆಯೊಂದು ನಾವು ನೋಡುತ್ತಿದ್ದಂತೆ ಒಮ್ಮೆಗೆ ಹಾರಿ ಬಂದು ಹೆಗಲ ಮೇಲೆ ಕುಳಿತಂತೆ ಈ ಹುಡುಗಿ ಹತ್ತಿರವಾದಳು. ತನ್ನೊಡಲ ಬಣ್ಣಗಳನ್ನೆಲ್ಲ ನಮ್ಮ ಮನೆಗೂ ಬಳಿದು ಸ್ವಕೀಯವಾದ ಇಷ್ಟಗಂಧದಲ್ಲಿ ಒಂದಾಗಿಬಿಟ್ಟಳು. ಲಲಿತೆಗಂತೂ ಅದೆಷ್ಟೋ ವರ್ಷಗಳಿಂದ ಒಳಗೇ ಜಿನುಗಿ ಫಲಕಾಣದೇ, ಅಲ್ಲಿಗೇ ಹೆಪ್ಪುಗಟ್ಟಿ ಉಳಿದಿದ್ದ ತಾಯ್ತನದ ಅನಂತರಾಗ ಕ್ಷಮಾಳ ನಲ್ಮೆಯ ಸ್ಪರ್ಶದಲ್ಲಿ ಚಿಗುರುತ್ತಾ ಮತ್ತೆ ಹಸಿರು ಹೊದ್ದು ಹೊರ ಬಂದಂತಾಯ್ತು.

ಒಂದು ಸಂಜೆ – ಮೊದಲಿಗೆ ಈಕೆ ಇಲ್ಲಿ ಬಂದಾಗ ಎದುರಿಗಿದ್ದ ನಾನೇ ಮಾತಾಡಿಸಿದ್ದೆ.

“ಮೇಡಂ ಇದ್ದಾರಾ?” ಎಂದು ಗೇಟಿನ ಬಳಿಯಿಂದ ಕೇಳಿಸಿದ ದನಿಯ ಕಡೆ ನೋಡಿದಾಗ – ಎರಡು ಅರಳುಗಣ್ಣುಗಳು, ತಮ್ಮೊಳಗಿನ ಅವಕಾಶದಲ್ಲಿ ಒಂದಿಷ್ಟು ಅಳುಕು, ಸಣ್ಣದೊಂದು ಕಾತರ ಕಂಡರೂ ಅದಕ್ಕೂ ಹೆಚ್ಚಾದ ಸ್ವಕೀಯ ಸ್ವಾಭಿಮಾನದಲ್ಲಿ ಹೊಳೆಯುತಿದ್ದವು. ದಾಖಲಿಸಿಕೊಂಡೆ. ಅಪರಿಚಿತ ಅಂತ ಅನಿಸಲೇ ಇಲ್ಲ. “ಅವರ